ಗುರ್ತಿಸಲು ವಿಗ್ ಒಂದೇ ಸಂಕೇತ. ಮಿಕ್ಕಂತೆ ಮೀಸೆ–ಗಡ್ಡ ಹಾಗೆಯೇ ಇದೆ. ಹೆಣ್ಣಿನಂತೆ ತುಸು ನುಲಿಯುತ್ತಾ ಸಂಭಾಷಣೆ ಹೇಳುವ ಹಾವ–ಭಾವ ಅದರಲ್ಲಿದೆ. ಹೆಣ್ಣುಮಕ್ಕಳು ಆ ಸರಣಿಯನ್ನು ಬಹಳವಾಗಿ ಮೆಚ್ಚಿಕೊಂಡರು.

ಆರೋಗ್ಯಕರವಾಗಿ ನಗಿಸುವುದು ಯಾವತ್ತೂ ಸವಾಲು ಎನ್ನುವ ಪ್ರಕಾಶ್, ತಮ್ಮ ಕಂಟೆಂಟ್‌ನಲ್ಲಿ ಆದಷ್ಟು ಕೆಟ್ಟ ಭಾಷೆ ಬಳಸಬಾರದು ಎನ್ನುವ ಎಚ್ಚರಿಕೆ ವಹಿಸುತ್ತಾರೆ. ಕೆಲವು ವರ್ಗದವರನ್ನು ದೃಷ್ಟಿಯಲ್ಲಿಟ್ಟುಕೊಂಡು ಆಗೀಗ ಪೋಲಿ ಪದಪುಂಜಗಳನ್ನು ಹಾಕಿರುವ ಸತ್ಯವನ್ನೂ ಒಪ್ಪಿಕೊಳ್ಳುತ್ತಾರೆ.

‘ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್’ (ಐಪಿಎಲ್) ನಡೆಯುವಾಗಲೆಲ್ಲ ಪಂದ್ಯಗಳ ಪ್ರಿವ್ಯೂ ಹಾಗೂ ರಿವ್ಯೂ ಮಾಡುವುದು ಇವರ ಇನ್ನೊಂದು ಹವ್ಯಾಸ. ಅದನ್ನು ತಮ್ಮದೇ ಜವಾರಿ ಶೈಲಿಯಲ್ಲಿ ಇವರು ಮಾಡುತ್ತಾರೆ.

ಹೊಳೆದದ್ದನ್ನು ಮೊಬೈಲ್‌ನಲ್ಲೋ, ಪೇಪರಿನ ಮೇಲೆಯೋ ಬರೆದುಕೊಳ್ಳುವ ಇವರು, ಕ್ರಮೇಣ ಅದನ್ನು ಸ್ಕ್ರಿಪ್ಟ್ ಆಗಿ ವಿಸ್ತರಿಸುವ ಪ್ರಕ್ರಿಯೆಯನ್ನು ಒಪ್ಪಿಕೊಳ್ಳುತ್ತಾರೆ. ಸ್ಥಳದಲ್ಲೇ ಕುಳಿತು ಏನೋ ಒಂದನ್ನು ಹೊಸೆದು, ವಿಡಿಯೊಗಳನ್ನು ಮಾಡುವುದಕ್ಕಿಂತ ಒಳ್ಳೆಯ ಹೋಂವರ್ಕ್ ಮಾಡಿಕೊಂಡಾಗ ಸಿಗುವ ರಿಸಲ್ಟ್ ಉತ್ತಮ ಎನ್ನುವುದು ಅವರ ಅನುಭವ ನುಡಿ.



ಕೈಲಿ ಬೇರೊಂದು ಕೆಲಸ ಇಟ್ಟುಕೊಂಡೇ ಯೂಟ್ಯೂಬರ್ ಆಗಬೇಕು. ಬರೀ ಅದೊಂದನ್ನೇ ಮಾಡಿ ಗೆಲ್ಲುತ್ತೇನೆ ಎನ್ನುವುದು ಕಷ್ಟ.

**-ಪ್ರಕಾಶ್ ಆರ್‌ಕೆ.**

ಉತ್ತರ ಕರ್ನಾಟಕದ್ದು ಅಡಿಕ್ಟ್ ಮಾಡುವ ಭಾಷೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಪ್ರಕಾಶ್ ಅವರು, ತಮ್ಮ ಹಾಡಿನ ವಿಡಿಯೊಗಳಲ್ಲಿ ‘ಪುಟ್ಟರಾಜ ಗವಾಯಿಗಳ ಆಶೀರ್ವಾದ’ ಎಂಬ ಒಕ್ಕಣೆಯನ್ನೂ ಹಾಕುತ್ತಾರೆ. ಅಜ್ಜರ ಆಶೀರ್ವಾದವೇ ತಮ್ಮ ಕ್ರಿಯಾಶೀಲತೆಗೆ ಇಂಬು ಎಂದು ನಂಬಿದ ಆ ಭಾಗದವರಲ್ಲಿ ಇವರೂ ಒಬ್ಬರು.

‘ಗಾನಯೋಗಿ’ ಎಂಬ ಹತ್ತು ಮಂದಿಯ ತಂಡವನ್ನು ಪ್ರಕಾಶ್ ಕಟ್ಟಿಕೊಂಡಿದ್ದಾರೆ. ಕನ್ನಡ ಶಾಲೆಗಳ ಅಭಿವೃದ್ಧಿ, ಸೇತುವೆಗಳ ಕಂಬಗಳ ಮೇಲೆ ಅಥವಾ ಹಳೆಯ ಬಸ್‌ಸ್ಟಾಪ್‌ಗಳ ತಂಗುದಾಣಗಳ ಗೋಡೆಗಳ ಮೇಲೆ ಉತ್ತರ ಕರ್ನಾಟಕದ ಐತಿಹಾಸಿಕ ಪ್ರಸಿದ್ಧರ ಚಿತ್ರಗಳನ್ನು ಬಿಡಿಸುವ ಕೆಲಸವನ್ನು ತಮ್ಮ ತಂಡದಿಂದ ಮಾಡುತ್ತಾ ಬಂದಿದ್ದಾರೆ. ಆ ಕೆಲಸಕ್ಕೆ ಯೂಟ್ಯೂಬ್ ವಿಡಿಯೊಗಳಿಂದ ಬರುವ ಹಣದ ಒಂದು ಭಾಗವನ್ನು ಬಳಸುತ್ತಾರೆ. ಇನ್ನೊಂದು ಭಾಗದ ಉಳಿಕೆ ಹಣವನ್ನು ವಿಡಿಯೊ ಚಿತ್ರೀಕರಣಕ್ಕೆಂದೇ ವಿನಿಯೋಗಿಸುತ್ತಾರೆ.

‘ಕೈಲಿ ಬೇರೊಂದು ಕೆಲಸ ಇಟ್ಟುಕೊಂಡೇ ಯೂಟ್ಯೂಬರ್ ಆಗಬೇಕು. ಅದೊಂದರಿಂದ ಗೆಲ್ಲುತ್ತೇನೆ ಎನ್ನುವುದು ಕಷ್ಟ’ ಎನ್ನುತ್ತಾರೆ. ತಮ್ಮ ಖಾನಾವಳಿಗೆ ಬರುವ ಯಾರಾದರೂ ಯೂಟ್ಯೂಬರ್ ಎಂದು ಗುರುತಿಸಿದರೆ, ಅವರ ಖುಷಿ ಇಮ್ಮಡಿಯಾಗುತ್ತದೆ. ■



ಊರಿನ ಜನ ಬಂಡಿ ಮಾಡಿಕೊಂಡು, ದೂರದೂರಿನ ಚಿತ್ರಮಂದಿರಗಳಿಗೆ ಹೋಗಿ ಸಿನಿಮಾ ನೋಡಿಕೊಂಡು ಬರುತ್ತಿದ್ದ ಕಾಲವಿತ್ತು. ಈಗ ಅಂಗೈ ಅಗಲದ ಮೊಬೈಲ್ ಮೇಲೆ ಮನರಂಜನೆಯ ಬ್ರಹ್ಮಾಂಡ ದೊರೆಯುತ್ತಿದೆ. ಇದು ಜನರ ನೋಡುವ ಸಂಸ್ಕೃತಿಯಲ್ಲಿ ಗಮನಾರ್ಹ ಬದಲಾವಣೆ ತರುತ್ತಿದೆ. ಮೂರು ತಾಸು ಒಂದೆಡೆ ಕುಳಿತು, ಎಲ್ಲವನ್ನೂ ತೊರೆದುಕೊಂಡಂತೆ ಕತ್ತಲಿನಲ್ಲಿ ಸಿನಿಮಾ ನೋಡುವ ಪರಿಪಾಟ ಈಚೆಗೆ ಕಡಿಮೆಯಾಗುತ್ತಿದೆ. ಅಲ್ಪಾವಧಿಯ ರೀಲ್ಸ್ ಮೇಲೆ ನೆಟ್ಟ ಕಣ್ಣು ನೆಟ್ಟಂತೆ ಇರುತ್ತವೆ. ನೋಡುವವರಿಗಿಂತ ಕಂಟೆಂಟ್ ರೂಪಿಸುವವರ ಸಂಖ್ಯೆಯೇ ಈಗ ಹೆಚ್ಚುತ್ತಿದೆ.

**-ಮಲ್ಲು ಬಾಗಲಕೋಟೆ**

ಕತ್ತಲಿನಲ್ಲಿ ಸಿನಿಮಾ ನೋಡುವ ಪರಿಪಾಟ ಈಚೆಗೆ ಕಡಿಮೆಯಾಗುತ್ತಿದೆ. ಅಲ್ಪಾವಧಿಯ ರೀಲ್ಸ್ ಮೇಲೆ ನೆಟ್ಟ ಕಣ್ಣು ನೆಟ್ಟಂತೆ ಇರುತ್ತವೆ. ನೋಡುವವರಿಗಿಂತ ಕಂಟೆಂಟ್ ರೂಪಿಸುವವರ ಸಂಖ್ಯೆಯೇ ಈಗ ಹೆಚ್ಚುತ್ತಿದೆ ಎನ್ನುವ ವ್ಯಂಗ್ಯೋಕ್ತಿಯನ್ನೂ ಅವರು ಹೇಳಿದರು.

‘ಟಿಕ್‌ಟಾಕ್’, ‘ಮೋಜೊ’ ಎಲ್ಲವೂ ಈಗ ಮನರಂಜನೆಯ ಮಾಧ್ಯಮಗಳಾಗಿ ಕೆಲವೇ ಸೆಕೆಂಡ್‌ಗಳಲ್ಲಿ ನೋಡುಗರಿಗೆ ಸಣ್ಣದೊಂದು ಝಲಕ್ ಕಾಣಿಸಿ, ಖುಷಿಪಡಿಸುತ್ತಿವೆ. ಈಗ ಕೃತಕ ಬುದ್ಧಿಮತ್ತೆ ಕೂಡ ಮನರಂಜನಾ ಕ್ಷೇತ್ರಕ್ಕೆ ಲಗ್ಗೆ ಇಟ್ಟಿರುದ್ದು, ಕಂಟೆಂಟ್ ಸೃಜಿಸುವ ವಿಷಯದಲ್ಲಿ ಮುಂದೆ ವ್ಯಾಪಕ ಬದಲಾವಣೆಗಳು ಆಗಲಿರುವ ಸಾಧ್ಯತೆಯ ಮೇಲೂ ಅವರು ಬೆಳಕು ಚೆಲ್ಲುತ್ತಾರೆ.

ಯೂಟ್ಯೂಬ್ ಅಥವಾ ರೀಲ್ಸ್ ಮನರಂಜನೆಯಲ್ಲಿ ಚೆಂದನೆಯ ಕತೆ ಇದ್ದರಷ್ಟೆ ಜನರು ನೋಡುತ್ತಾರೆ ಎನ್ನುವುದಕ್ಕೂ ಅವರು ತಮ್ಮದೇ ಅನುಭವಗಳ ಉದಾಹರಣೆಗಳನ್ನು ಕೊಡುತ್ತಾರೆ.

ತಾಳಗುಂದಿಯ ಮುಳುಗಡೆ ಪ್ರದೇಶದವರಾದ ಮಲ್ಲು ಅವರಿಗೆ ಸಿನಿಮಾ ಮಾಧ್ಯಮ ಈಗ ಹೊರಳಿರುವ ಬಗೆಯ ಅರಿವೂ ಇದೆ. ದೊಡ್ಡ ಬಜೆಟ್‌ನ, ಸ್ಟಾರ್‌ಗಳ ಸಿನಿಮಾಗಳನ್ನು ಮುಗಿಬಿದ್ದು ನೋಡುವ ಅಭಿಮಾನಿಗಳು ಈಗಲೂ ಇರುವುದರಿಂದ ಆ ಮಾಧ್ಯಮಕ್ಕೆ ಅಳಿವು ಎನ್ನುವುದಿಲ್ಲ ಎಂದೂ ನಂಬಿದ್ದಾರೆ.